ದಿನಾಂಕ 10-12-2024 ರಂದು ಸಾಕ್ಷಿಯನ್ನು ಮರಳಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ 1 ನೇ ಅರೋಪಿ ಪರ ಶ್ರೀ ಎ.ಬಿ.ಹೆಚ್. ವಕೀಲರಿಂದ**

1) ನನ್ನ ಮನೆ ನನ್ನ ಕಚೇರಿಯಿಂದ ಸುಮಾರು 1 ಕಿ.ಮೀಗಳ ಅಂತರದಲ್ಲಿದೆ. ನನ್ನ ಕಚೇರಿಯ ಸಮಯ ಬೆಳಿಗ್ಗೆ 10-15 ರಿಂದ ಸಂಜೆ 5-30 ಗಂಟೆಯವರೆಗೆ. ನಮ್ಮ ಕಚೇರಿಯಲ್ಲಿ ಬಯೋಮೆಟ್ರಿಕ್ ಸೌಲಭ್ಯ ಇದೆ. ನಾನು ಲೋಕಾಯುಕ್ತ ಕಚೇರಿಗೆ ಹೋಗಬೇಕಾಗಿರುವುದಕ್ಕೆ ನನ್ನ ಮೇಲಾಧಿಕಾರಿ ಆದಿನವೇ ಹೇಳಿದ್ದರು. ಅದಕ್ಕಾಗಿ ಬೆಳಿಗ್ಗೆ 9-30 ಗಂಟೆಗೆ ಫೋನ್ ಮಾಡಿದ್ದರು. ಆದಿನ ನಾನು ನನ್ನ ಕಚೇರಿಗೆ ಹೋಗಿಲ್ಲ. ನನಗೆ ನನ್ನ ಮೇಲಾಧಿಕಾರಿ ಲಿಖಿತ ಆದೇಶವನ್ನು ನೀಡಿಲ್ಲ. ನಾನು ಎಸಿಬಿ ಕಚೇರಿಗೆ ಬೈಕ್ ನಲ್ಲಿ ಹೋಗಿದ್ದೆ. ನನ್ನ ಮನೆಯಿಂದ ಎಸಿಬಿ ಕಚೇರಿ ಸುಮಾರು 13 ಕಿ.ಮೀ ಅಂತರ. ನಾನು ಎಸಿಬಿ ಕಚೇರಿಗೆ ಬಂದಾಗ 10 ಗಂಟೆಯ ಸಮಯ. ನಾನು ಮತ್ತು ಚಾಸಾ -5 ಉಡುಪಿಯ ಬಸ್ ಸ್ಟಾಂಡ್ ನಿಂದ ಎಸಿಬಿ ಕಚೇರಿಗೆ ಹೋಗಿದ್ದೆವು. ಚಾಸಾ -5 ರವರು ಎಸಿಬಿ ಕಚೇರಿಗೆ ಬರುವುದಾಗಿ ನನ್ನ ಮೇಲಾಧಿಕಾರಿ ಹೇಳಿದ್ದರು.

2) ಕಾಪುವಿನಿಂದ ಎಸಿಬಿ ಕಚೇರಿಗೆ ಬರಲು ಬಸ್ ಸ್ಟಾಂಡ್ ಗೆ ಹೋಗುವ ಅವಶ್ಯಕತೆ ಇಲ್ಲ ಎಂದರೆ ನಿಜ. ಕಾಪುವಿನಿಂದ ಬರುವ ಎಸಿಬಿ ಕಚೇರಿಯಿಂದ ಅರ್ಧ ಕಿ.ಮೀ ಅಂತರದಲ್ಲಿ ಬಸ್ ಸ್ಟಾಂಡ್ ಇದೆ ಎಂದರೆ ನಿಜ. ಆದಿನ ನಾನು ಬೆಳಿಗ್ಗೆ ಚಾಸಾ -5 ಇವರಿಗೆ ಫೋನ್ ಮಾಡಿ ಮಾತನಾಡಿದ್ದೆ. ಆದಿನ ನಾವು ಎಸಿಬಿ ಕಚೇರಿಗೆ ಹೋದಾಗ ಅಲ್ಲಿ ಸಾಕ್ಷಿದಾರರು ಇದ್ದರು. ಅವರನ್ನು ಪೊಲೀಸರು ನಮಗೆ ಪರಿಚಯಿಸುವ ಮೊದಲು ನಮ್ಮ ಮತ್ತು ಅವರ ನಡುವೆ ಯಾವುದೇ ಮಾತುಕತೆ ಇರಲಿಲ್ಲ. ಆದಿನ ಚಾಸಾ -1 ಇವರ ಮೊಬೈಲ್ ನಿಂದ ಯಾವುದೇ ಸಂಭಾಷಣೆಗಳನ್ನು ಕೇಳಿಸಿಲ್ಲ, ಅದರೆ ಡಿವಿಡಿಯಿಂದ ಕೇಳಿತ್ತು. ಆದಿನ ಚಾಸಾ -1 ಇವರ ಮೊಬೈಲ್ ನಲ್ಲಿಯ ಸಂಭಾಷಣೆಯನ್ನು ಯಾವ ರೀತಿಯಾಗಿ ಡಿವಿಡಿಗೆ ವರ್ಗಾವಣೆ ಮಾಡಿದ್ದರೆಂದು ನಮಗೆ ಹೇಳಿಲ್ಲ, ನಾವು ಕೇಳಿಲ್ಲ.

3) ಆದಿನ ನಾವು ಎಸಿಬಿ ಕಚೇರಿಗೆ ಹೋದಾಗ ಅಧಿಕಾರಿಗಳನ್ನು ಬಿಟ್ಟು 6 – 7 ಜನ ಪೊಲೀಸ್ ಸಿಬ್ಬಂದಿಗಳು ಇದ್ದರು. ರೆಕಾರ್ಡ ಆಗಿದ್ದ ಸಂಭಾಷಣೆಯನ್ನು ಪೊಲೀಸ್ ಅಧಿಕಾರಿ ಡಿ.ವೈ,ಎಸ್ ಪಿ ನಮಗೆ ಕೇಳಿಸಿದ್ದರು. ನಾನು ಅಲ್ಲಿಗೆ ಹೋಗುವ ಮೊದಲು ಸದರಿ ಡಿವಿಡಿ ಪೊಲೀಸರ ಬಳಿಯಲ್ಲಿ ಇತ್ತು. ಸೋಡಿಯಂ ಕಾರ್ಬೊನೇಟ್ ಎಂದರೆ ಏನು ಎಂದು ನನಗೆ ಆ ಕಚೇರಿಗೆ ಹೋಗುವ ಮೊದಲು ತಿಳಿದಿರಲಿಲ್ಲ. ನಾವು ಆದಿನ ಸುಮಾರು 1-45 ಗಂಟೆಗಳ ಸಮಯ ಎಸಿಬಿ ಕಚೇರಿಯಲ್ಲಿ ಇದ್ದೆವು.

4) ಪೊಲೀಸರು ಪ್ರಾಯೋಗಿಕವಾಗಿ ನಮ್ಮ ಮುಂದೆ ಯಾವುದೇ ದ್ರಾವಣಗಳನ್ನು ತಯಾರಿಸಿಲ್ಲ, ಮತ್ತು ಅವುಗಳ ಮಾದರಿಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ತಯಾರಿಸಿದ ದ್ರಾವಣವನ್ನು ಹೇಗೆ ಬಳಸುತ್ತಾರೆಂದು ನಮಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ಈ ಕುರಿತಾಗಿ ಅಲ್ಲಿ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಆದಿನ ಎಸಿಬಿ ಕಚೇರಿಯಿಂದ ಹೋಗುವಾಗ ನಮ್ಮ ಬಳಿ ನಮ್ಮ ಮೊಬೈಲ್,ಖರ್ಚಿಫ್, ಪರ್ಸಗಳನ್ನು ಬಿಟ್ಟು ಬೇರೆ ವಸ್ತುಗಳು ಇರಲಿಲ್ಲ ಎಂದರೆ, ನೋಟುಗಳು ಚಾಸಾ-1 ಇವರ ಬಳಿ ಇತ್ತು. ಅದಕ್ಕಾಗಿ ನಾವು ಯಾವುದೇ ದಾಖಲೆ, ಪುಸ್ತಕಗಳನ್ನು ತೆಗೆದುಕೊಂಡು ಹೋಗಿಲ್ಲ.

5) ಎಸಿಬಿ ಕಚೇರಿಯಿಂದ ಬನ್ನಂಜೆ ಮೂಲಕ ಮಣಿಪಾಲದ ಆರೋಪಿತರ ಕಚೇರಿಗೆ ಹೋಗಿದ್ದೆವು. ಆದಿನ ನಾವು ಮೂರು ಜೀಪ್ ಗಳಲ್ಲಿ ಹೋಗಿದ್ದೆವು. ನಮ್ಮ ವಾಹನದಲ್ಲಿ ನಾವು ಇಬ್ಬರು ಮತ್ತು 4 ಜನ ಪೊಲೀಸ್ ಸಿಬ್ಬಂದಿಗಳು ಇದ್ದೆವು. ಚಾಸಾ - 1 ಆದಿನ ನಮ್ಮ ವಾಹನದಲ್ಲಿ ಇರಲಿಲ್ಲ. ಆದಿನ ಮಣಿಪಾಲದ ಆರ್ ಟಿ ಓ ಕಚೇರಿಗೆ ಹೋಗಲು ಸುಮಾರು 40 ನಿಮಿಷ ಹಿಡಿದಿತ್ತು. ನಮ್ಮ ವಾಹನ ಆರ್ ಟಿ ಓ ಕಚೇರಿಯ ಹೊರಗಡೆ ನಿಲ್ಲಿಸಿ ಹೋಗಿತ್ತು. ಕಚೇರಿಯ ಹೊರಗಡೆ ರಸ್ತೆಯ ಬಳಿ ನಿಲ್ಲಿಸಿ ಹೋಗಿತ್ತು. ಆದಿನ ಕಚೇರಿಯಿಂದ ಹೊರಗೆ ಸುಮಾರು 20 ನಿಮಿಷ ಇದ್ದೆವು. ಆದಿನ ನಾನು, ಚಾಸಾ -1, 5, ಮತ್ತು 3-4 ಜನ ಪೊಲೀಸರ ಜೊತೆ ಕಚೇರಿಯ ಒಳಗೆ ಹೋಗಿದ್ದೆವು. ಪೊಲೀಸ್ ಅಧಿಕಾರಿಗಳು ಮೊದಲು ನಮ್ಮೊಂದಿಗೆ ಕಚೇರಿಯ ಒಳಗೆ ಬರಲಿಲ್ಲ. ಆದಿನ ಚಾಸಾ -1 ಇವರ ಜೇಬಿನಲ್ಲಿ ವಾಯ್ಸ ರೆಕಾರ್ಡ್‌ರನ್ನು ನಾನು ಇಟ್ಟಿದ್ದೆ.

(ಈ ಹಂತದಲ್ಲಿ ಚಾಸಾ -1 ಇವರ ಪಾಟೀಸವಾಲು ಆಗಿರದೇ ಇದ್ದುದರಿಂದ ಮತ್ತು ಮುಂದುವರಿದ ಪಾಟೀಸವಾಲಿನಲ್ಲಿ ಪ್ರತಿರಕ್ಷಣೆಯ ಅಂಶಗಳು ಬರುತ್ತಿರುವುದರಿಂದ ಚಾಸಾ -1 ಇವರ ಪಾಟೀಸವಾಲಿಗೆ ತೊಂದರೆ ಆಗುವ ಸಂಭವ ಇರುವುದರಿಂದ ಮುಂದೂಡಲು ಕೋರಿರುತ್ತಾರೆ. ಅದ್ದರಿಂದ ಪಾಟೀಸವಾಲನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ